"ಮಧುರ ಮಕ್ಕಳೇ - ಮನೆ-ಮನೆಯನ್ನು ಸ್ವರ್ಗವನ್ನಾಗಿ ಮಾಡುವ ಜವಾಬ್ದಾರಿಯು ನೀವು ಮಕ್ಕಳ ಮೇಲಿದೆ. ಎಲ್ಲರಿಗೆ ಪತಿತರಿಂದ ಪಾವನರಾಗುವ ಲಕ್ಷ್ಯವನ್ನು ಕೊಡಬೇಕು. ದೈವೀಗುಣಗಳನ್ನು ಧಾರಣೆ ಮಾಡಬೇಕು"

ಪ್ರಶ್ನೆ: ಈಶ್ವರೀಯ ಮಡಿಲಿಗೆ ಬಂದಾಗ ನೀವು ಮಕ್ಕಳಿಗೆ ಯಾವ ಅನುಭವ ಆಗುತ್ತದೆ?

ಉತ್ತರ: ಮಂಗಳ ಮಿಲನವನ್ನು ಮಾಡುವ ಅನುಭವ ಈಶ್ವರೀಯ ಮಡಿಲಿನಲ್ಲಿ ಬರುವಂತಹ ಮಕ್ಕಳಿಗೆ ಆಗುತ್ತದೆ. ನಿಮಗೆ ತಿಳಿದಿದೆ - ಸಂಗಮಯುಗ ಈಶ್ವರನೊಂದಿಗೆ ಮಿಲನ ಮಾಡುವಂತಹ ಯುಗವಾಗಿದೆ. ನೀವು ಈಶ್ವರನೊಂದಿಗೆ ಮಿಲನ ಮಾಡಿ ಭಾರತವನ್ನು ಸ್ವರ್ಗವನ್ನಾಗಿ ಮಾಡುತ್ತೀರಿ. ಈ ಸಮಯದಲ್ಲಿ ನೀವು ಮಕ್ಕಳು ಸಮ್ಮುಖದಲ್ಲಿ ಮಿಲನ ಮಾಡುತ್ತೀರಿ. ಇಡೀ ಕಲ್ಪದಲ್ಲಿ ಯಾರೂ ಸಹ ಸಮ್ಮುಖದಲ್ಲಿ ಮಿಲನ ಮಾಡುವುದಿಲ್ಲ. ನಿಮ್ಮದು ಇದು ಬಹಳ ಚಿಕ್ಕದಾದ ಈಶ್ವರೀಯ ಕುಲವಾಗಿದೆ. ಶಿವತಂದೆಯು ತಾತನಾಗಿದ್ದಾರೆ. ಬ್ರಹ್ಮಾರವರು ತಂದೆಯಾಗಿದ್ದಾರೆ ಮತ್ತು ನೀವು ಮಕ್ಕಳು ಸಹೋದರ-ಸಹೋದರಿ ಅನ್ಯ ಯಾವುದೇ ಸಂಬಂಧವಿಲ್ಲ.

ಗೀತೆ: ಹೊಸ ಯುಗದ ಮೊಗ್ಗುಗಳು............

ಓಂ ಶಾಂತಿ. ತಂದೆಯು ಯಾವಾಗ ಬರುತ್ತಾರೋ ಆಗ ಮೊದಲು ಸ್ವಲ್ಪ ಸಮಯ ಶಾಂತಿಯಲ್ಲಿ ಕುಳಿತುಕೊಳ್ಳಬೇಕು ಏಕೆಂದರೆ ಮೊಟ್ಟಮೊದಲು ನೆನಪಿನದಾನವನ್ನು ಕೊಡಬೇಕಾಗುತ್ತದೆ. ನೆನಪಿನಿಂದಲೇ ಪತಿತರನ್ನು ಪಾವನ ಮಾಡಬೇಕಾಗಿದೆ. ನೀವು ಮಕ್ಕಳು ದಾನವನ್ನು ಕೊಡುತ್ತಿದ್ದೀರಿ ಮತ್ತು ತೆಗೆದುಕೊಳ್ಳುತ್ತಿದ್ದೀರಿ. ತಂದೆಯು ಬಂದು ಮುಳ್ಳಿನಿಂದ ಮೊಗ್ಗುಗಳನ್ನಾಗಿ ಮಾಡುತ್ತಿದ್ದಾರೆ, ಮೊಗ್ಗುಗಳಿಂದ ಹೂಗಳಾಗುತ್ತೀರಿ. ಪ್ರತಿಯೊಬ್ಬರನ್ನು ಸ್ವರ್ಗಕ್ಕೆ ಯೋಗ್ಯರನ್ನಾಗಿ ಮಾಡುವುದೇ ನಮ್ಮ ಸೇವೆಯಾಗಿದೆ ಎಂಬುದನ್ನು ನೀವು ತಿಳಿದಿದ್ದೀರಿ. ಹಾಗೆಯೇ ನೀವೂ ಸಹ ಆಗುತ್ತಿದ್ದೀರಿ. ತಂದೆಯು ಬಂದು ಮೊದಲು ಆರೋಗ್ಯ, ನಂತರ ಐಶ್ವರ್ಯವನ್ನು ಕೊಡುತ್ತಾರೆ. ಮೊದಲು ಶಾಂತಿ ನಂತರ ಸುಖ ವಾಸ್ತವದಲ್ಲಿ ಸುಖ ಎರಡರಲ್ಲಿಯೂ ಇದೆ. ನೀವು ಮಕ್ಕಳಿಗೆ ಸುಖ ಮತ್ತು ಶಾಂತಿ ಎರಡೂ ಬೇಕು. ಸನ್ಯಾಸಿಗಳು ಮುಂತಾದವರಿಗೆ ಕೇವಲ ಶಾಂತಿ ಬೇಕಾಗಿದೆ. ಸನ್ಯಾಸಿಗಳು ಸುಖವನ್ನು ಬಯಸುವುದಿಲ್ಲ. ಸುಖವನ್ನು ಅವರು ಕೊಡಲು ಸಾಧ್ಯವಿಲ್ಲ. ಒಂದುವೇಳೆ ಶಾಂತಿ ಕೊಡುತ್ತೇವೆ ಅಂದರೂ ಸಹ ಅಲ್ಪಕಾಲ ಕ್ಷಣ ಭಂಗುರ ಸುಖವಾಗಿದೆ. ಸುಖವು ಕಾಗವಿಷ್ಟ ಸಮಾನವೆಂದು ಹೇಳುತ್ತಾರೆ. ಸನ್ಯಾಸಿಗಳು ಮುಕ್ತಿಗಾಗಿ ಶಾಂತಿಯನ್ನೇ ಬಯಸುತ್ತಾರೆ. ಮುಕ್ತಿಯನ್ನು ಬೇರೆ ಯಾರೂ ಕೊಡಲು ಸಾಧ್ಯವಿಲ್ಲ ಏಕೆಂದರೆ ಬೇಹದ್ದಿನ ಮುಕ್ತಿ, ಬೇಹದ್ದಿನ ಜೀವನ್ಮುಕ್ತಿ ಎಂದು ಹೇಳಲಾಗುತ್ತದೆ. ಬೇಹದ್ದಿನ ತಂದೆ0iÉೇ ಕೊಡಲು ಸಾಧ್ಯವಿದೆ. ಈ ಸಮಯದಲ್ಲಿ ಎಲ್ಲರೂ ಮುಳ್ಳುಗಳಾಗಿದ್ದಾರೆ ಎಂಬುದನ್ನು ನೀವು ತಿಳಿದಿದ್ದೀರಿ. ಮುಳ್ಳುಗಳು ಚುಚ್ಚುತ್ತವೆ, ಪರಸ್ಪರ ಒಬ್ಬರಿಗೊಬ್ಬರು ಕಾಮ ಕಟಾರಿಯಿಂದ ಹೊಡೆಯುತ್ತಾರೆ ಎಂದು ತಂದೆಯು ತಿಳಿಸುತ್ತಾರೆ. ಕಾಮ ವಿಕಾರಕ್ಕೆ ಹಿಂಸೆ ಎಂದು ಹೇಳಲಾಗುತ್ತದೆ. ನೀವು ವಿಕಾರದಲ್ಲಿ ಹೋಗಿರುವಿರೆಂದರೆ ಆದಿ-ಮಧ್ಯ-ಅಂತ್ಯ ಒಬ್ಬರಿಗೊಬ್ಬರು ದುಃಖವನ್ನೇ ಕೊಡುತ್ತೀರಿ. ಯಾವಾಗ ಹೊಸ ಸೃಷ್ಟಿ, ಹೊಸ ಭಾರತ ಇರುತ್ತದೆಯೋ ಆಗ ಸುಖವಿರುತ್ತದೆ. ಸುಖಿ ಪ್ರಪಂಚವೆಂದು ಸ್ವರ್ಗಕ್ಕೆ ಹೇಳಲಾಗುತ್ತದೆ, ಇದು ದುಃಖದ ಪ್ರಪಂಚವಾಗಿದೆ. ಭಾರತವಾಸಿಗಳು ಯಾವ ದೇವೀ-ದೇವತೆಗಳ ಪೂಜಾರಿಗಳಾಗಿದ್ದಾರೆಯೋ ಅವರಿಗೆ ಇಲ್ಲಿ ದೇವೀ-ದೇವತೆಗಳ ರಾಜ್ಯವಿತ್ತು. ಅದಕ್ಕೆ ಸ್ವರ್ಗವೆಂದು ಕರೆಯಲಾಗುತ್ತದೆ ಎಂದು ತಿಳಿದಿದೆ. ಇದೂ ಸಹ ಅನುಭೂತಿ ಆಗುತ್ತದೆ. ಲಕ್ಷ್ಮೀ-ನಾರಾಯಣರ ಮಂದಿರಕ್ಕೆ ಹೋಗಿ ಅವರ ಮಹಿಮೆಯನ್ನು ಮಾಡುತ್ತಾರೆ. ಇವರು ಭಾರತದ ಮಾಲೀಕರಾಗಿದ್ದರು, ಭಾರತ ಸ್ವರ್ಗವಾಗಿತ್ತು, ಇದೂ ಸಹ ಅನುಭೂತಿ ಆಗುತ್ತದೆ. ಆದರೆ ಗಾಳಿಯ ಸಮಾನವಾಗಿದೆ. ಭಾರತದಲ್ಲಿ ಇಷ್ಟೊಂದು ಲಕ್ಷ್ಮೀ-ನಾರಾಯಣರ ಮಂದಿರಗಳನ್ನು ಮಾಡುತ್ತಿದ್ದಾರೆ, ಅವರ ರಾಜಧಾನಿಯು ಇಲ್ಲಿಯೇ ಇತ್ತು. ಮಹಾರಾಜಾ-ಮಹಾರಾಣಿ ಎಂದು ಕರೆಯಲಾಗುತ್ತದೆ ಆದರೆ ಅವರು ಯಾವಾಗ ಇದ್ದರು ಎಂಬುದನ್ನು ಮರೆತುಬಿಡುತ್ತಾರೆ. ಇದು ಎಷ್ಟೊಂದು ಸಾಮಾನ್ಯವಾದ ತಪ್ಪಾಗಿದೆ. ಇದು ಆಗಿರುವುದೂ ಸಹ ಹೆಚ್ಚು ಸಮಯವು ಆಗಿಲ್ಲ. 5000 ಸಾವಿರ ವರ್ಷಗಳ ಮಾತಾಗಿದೆ. ಕ್ರೈಸ್ತ, ಬುದ್ಧ ಮುಂತಾದವರು ಬಂದು 2500 ವರ್ಷಗಳಾಗಿದೆ. ಅವರಿಗೆ ಪುನಃ ಅವತರಣೆ ಆದರೆಂದು ಹೇಳಲಾಗುತ್ತದೆ. ಪ್ರತಿಯೊಬ್ಬರು ಅವತರಣೆ ಆಗುತ್ತಾರೆ, ಆತ್ಮವು ಬಂದು ಅವತರಣೆ ಆಗಿದೆ. ಇದಕ್ಕೂ ಸಹ ಪುನರ್ಅವತರಣೆ ಎಂದು ಹೇಳಲಾಗುತ್ತದೆ. ಮೊದಲು ದೊಡ್ಡವರ ಹೆಸರು ಗಾಯನ ಮಾಡಲಾಗುತ್ತದೆ. ಪರಮಪಿತ ಪರಮಾತ್ಮ ಪುನರ್ಅವತರಣೆ ಮಾಡುತ್ತಾರೆ. ಅದಕ್ಕೋಸ್ಕರ ಶರೀರದಲ್ಲಿ ಪ್ರವೇಶ ಮಾಡುತ್ತಾರೆ. ಅವತರಣೆ ಅರ್ಥ ಇದಾಗಿದೆ ಅಂದರೆ ಯಾರು ದೊಡ್ಡ ದೊಡ್ಡ ಸುಪ್ರಸಿದ್ಧ ವ್ಯಕ್ತಿಗಳು ಇರುವರೋ ಅವರಿಗೆ ಹೇಳಲಾಗುತ್ತದೆ, ಹೇಗೆ ಬುದ್ಧನ ಅವತರಣೆ, ಕ್ರೈಸ್ತನ ಅವತರಣೆ ಆಗಿದೆ. ಬುದ್ಧ ಮತ್ತು ಕ್ರೈಸ್ತನಿಗೆ ಭಾರತದೊಂದಿಗೆ ಸಂಬಂಧವಿದೆ ಎಂದು ಕಂಡುಬರುತ್ತದೆ. ಎಂದಿನಿಂದ ಹುಸೇನ್ ಬಂದರೋ ಅಂದಿನಿಂದ ಮುಸಲ್ಮಾನರದ್ದು ಪ್ರಾರಂಭವಾಯಿತು, ಗುರುನಾನಕರನ್ನು ಸುಮಾರು 500 ವರ್ಷಗಳಿಂದ ಇತ್ತೀಚೆಗೆ ತೋರಿಸಲಾಗಿದೆ, ಅವರದ್ದೂ ಸಹ ಚಿಕ್ಕದಾದಂತಹ ಅವತರಣೆ ಆಗಿದೆ. ಶ್ರೇಷ್ಠರ ಮೊಟ್ಟಮೊದಲನೇ ಜನ್ಮವು ಅವತರಣೆಯದ್ದಾಗಿರುತ್ತದೆ. ಈಗ ಪರಮಪಿತ ಪರಮಾತ್ಮನನ್ನು ಕರೆಯುತ್ತಾರೆ ಆದರೆ ಅವರು ಯಾವಾಗ ಬರುತ್ತಾರೆ?

ಹೇಗೆ ಬರುತ್ತಾರೆ ಎಂಬುದನ್ನು ತಿಳಿದಿಲ್ಲ. ಶರೀರದಲ್ಲಂತೂ ಬರಲೇಬೇಕಾಗುತ್ತದೆ. ಆದರೆ ಅವರು ಜನ್ಮವನ್ನು ತೆಗೆದುಕೊಳ್ಳದಿರುವ ಕಾರಣ ಅವರದ್ದು ಅವತರಣೆ ಎಂದು ಕರೆಯಲಾಗುತ್ತದೆ. ಚಿಕ್ಕ ಮಗುವಂತೂ ಆಗುವುದಿಲ್ಲ. ಶ್ರೇಷ್ಠ ಅವತರಣೆ ಪರಮಪಿತ ಪರಮಾತ್ಮನದ್ದು ಎಂದು ಹೇಳಲಾಗುತ್ತದೆ. ಪರಮಪಿತ ಪರಮಾತ್ಮ 24 ಅವತಾರಗಳನ್ನು ತೆಗೆದುಕೊಳ್ಳುತ್ತಾರೆ ಎಂದು ಹೇಳುತ್ತಾರೆ. ಕಲ್ಲಿ-ಕಲ್ಲಿನಲ್ಲಿಯೂ ಅವತರಣೆ ಮಾಡುತ್ತಾರೆಂದು ಹೇಳುತ್ತಾರೆ. ಈ ರೀತಿ ಹೇಳುವುದರಿಂದ ಪತನವನ್ನು ಹೊಂದುತ್ತಾರೆ. ಹೇಗೆ ಭಾರತವು ಪತನವಾಗುತ್ತದೆಯೋ ಹಾಗೆಯೇ ಅವರ ಕರ್ಮವೂ ಸಹ ಕನಿಷ್ಠಮಟ್ಟದ್ದಾಗುತ್ತದೆ. ತಂದೆಯು ಹೊಸ ಪ್ರಪಂಚದ ರಚಯಿತನಾಗಿದ್ದಾರೆ. ಹೊಸ ಪ್ರಪಂಚ ಮತ್ತು ಹಳೆಯ ಪ್ರಪಂಚದ ಸಂಗಮದಲ್ಲಿ ಬರುತ್ತಾರೆ. ಇವರದು ಎಲ್ಲರಿಗಿಂತ ಶ್ರೇಷ್ಠ ಅವತರಣೆ ಎಂದು ಹೇಳಲಾಗುತ್ತದೆ ಆದರೆ ಮನುಷ್ಯರು ತಿಳಿದುಕೊಳ್ಳುವುದಿಲ್ಲ ಏಕೆಂದರೆ ಪರಮಾತ್ಮನಿಂದ ವಿಮುಖರಾಗಿದ್ದಾರೆ. ನಿರಾಕಾರನ ಪರಿಚಯವಂತೂ ಇದೆ ಆದರೆ ಪರಮಾತ್ಮ ಯಾವಾಗ ಬರುತ್ತಾರೆ? ಬಂದು ಏನು ಮಾಡುತ್ತಾರೆ? ಎಂಬುದನ್ನು ತಿಳಿದುಕೊಂಡಿಲ್ಲ. ವಿಷ್ಣುವನ್ನು ಅವತರಿತರೆಂದು ಹೇಳುವುದಿಲ್ಲ. ದೇವೀ-ದೇವತಾ ಧರ್ಮದ ಪುನರ್ಅವತರಣೆ ಎಂದು ಹೇಳುವುದಿಲ್ಲ, ದೇವೀ-ದೇವತಾ ಧರ್ಮದ ಸ್ಥಾಪನೆ ಎಂದು ಹೇಳಲಾಗುತ್ತದೆ.

ವಿಷ್ಣು ಅವತರಣೆಯ ಒಂದು ನಾಟಕವನ್ನೂ ಸಹ ಮಾಡುತ್ತಾರೆ. ವಾಸ್ತವದಲ್ಲಿ ವಿಷ್ಣುವಿನ ಅವತರಣೆಯ ಮಾತಂತೂ ಇಲ್ಲವೇ ಇಲ್ಲ. ನೀವೀಗ ವಿಷ್ಣುವಿನ ಕುಲದವರಾಗುತ್ತಿದ್ದೀರಿ, ಈಶ್ವರನ ಕುಲದವರಾಗಿದ್ದಿರಿ. ಶಿವಬಾಬಾರವರ ಮಗು ಬ್ರಹ್ಮಾ, ಬ್ರಹ್ಮಾರವರ ಮಕ್ಕಳು ನೀವಾಗಿದ್ದೀರಿ, ಇದಕ್ಕೆ ಈಶ್ವರೀಯ ಕುಲವೆಂದು ಹೇಳಲಾಗುತ್ತದೆ. ನಾನು ಬಂದು ನಿಮ್ಮನ್ನು ನನ್ನವರನ್ನಾಗಿ ಮಾಡಿಕೊಳ್ಳುತ್ತೇನೆ ಎಂದು ಪರಮಪಿತ ಪರಮಾತ್ಮ ಹೇಳುತ್ತಾರೆ. ನಾನು ಬಂದು ನೀವು ಮಕ್ಕಳ ತಂದೆ ಆಗುತ್ತೇನೆ ಆದರೆ ನಾನು ಎಲ್ಲರ ತಂದೆ ಆಗಿದ್ದೇನೆ ನೀವು ಈಗ ಬ್ರಹ್ಮಾರವರ ಮೂಲಕ ನನ್ನವರಾಗಿದ್ದೀರಿ. ಆದ್ದರಿಂದ ನೀವು ನನ್ನನ್ನು ತಾತ ಎಂದು ಕರೆಯುತ್ತೀರಿ. ಆತ್ಮಗಳ ತಂದೆಯಾಗಿದ್ದೇನೆ, ಈ ಸಮಯದಲ್ಲಿ ನಾನು ಬಂದಿದ್ದೇನೆ ಎಂದು ಎಲ್ಲರೂ ತಿಳಿದಿದ್ದಾರೆ. ನೀವೇ ಈಗ ಮಿಲನ ಮಾಡುತ್ತೀರಿ. ಯಾವಾಗ ತಂದೆಯು ಬಂದು ಜನ್ಮ ಕೊಡುತ್ತಾರೆ ಆಗ ಬೇಹದ್ದಿನ ತಂದೆಯೊಂದಿಗೆ ಮಿಲನ ಮಾಡುತ್ತೀರಿ. ಈಗ ಬ್ರಹ್ಮಾರವರ ಮೂಲಕ ನಿಮ್ಮನ್ನು ಧರ್ಮದ ಮಕ್ಕಳನ್ನಾಗಿ ಮಾಡಿಕೊಂಡಿದ್ದಾರೆ, ವಿಕಾರದಿಂದಂತೂ ಮಕ್ಕಳಾಗಲು ಸಾಧ್ಯವಿಲ್ಲ. ಇಷ್ಟೊಂದು ಜನ ಪ್ರಜೆಗಳಿದ್ದಾರೆ, ಸಹೋದರ-ಸಹೋದರಿಯರು ಬಹಳ ಮಂದಿ ಇದ್ದೀರಿ, ಅಂದರೆ ಇವರೆಲ್ಲರೂ ಮುಖವಂಶಾವಳಿಗಳು ಆಗಿದ್ದಾರಲ್ಲವೇ. ಸನ್ಯಾಸಿಗಳ ವಂಶಾವಳಿ ಇರುವುದಿಲ್ಲ ಏಕೆಂದರೆ ಅವರಲ್ಲಿ ತಾತ, ತಂದೆ ಯಾವುದೇ ಸಂಬಂಧವಿರುವುದಿಲ್ಲ. ಇಲ್ಲಿ ತಂದೆಯು ಇದ್ದಾರೆ, ತಾತನೂ ಸಹ ಇದ್ದಾರೆ. ತಾತನೆಂದು ಇವರಿಗೆ ಹೇಳಲಾಗುತ್ತದೆ. ತಂದೆಯೇ ಬಂದು ತನ್ನವರನ್ನಾಗಿ ಮಾಡಿಕೊಳ್ಳುತ್ತಾರೆ. ನಾವು ಈಶ್ವರನ ಮಡಿಲಿನಲ್ಲಿ ಬಂದಿದ್ದೇವೆ ಎಂದು ನೀವು ತಿಳಿದಿದ್ದೀರಿ. ಇದು ಮಂಗಳ ಮಿಲನವಾಗಿದೆ. ಕಲಿಯುಗದ ಅಂತ್ಯ ಮತ್ತು ಸತ್ಯಯುಗದ ಆದಿ, ಇದಕ್ಕೇ ಸಂಗಮಯುಗ ಎಂದು ಹೇಳಲಾಗುತ್ತದೆ. ಸಂಗಮಯುಗದಲ್ಲಿ ಮಿಲನವಾಗುತ್ತದೆ. ಹೇಗೆ ಮೂರು ನದಿಗಳ ಸಂಗಮವಿದೆ ಅದರಲ್ಲಿ ಏನಾಗುತ್ತದೆ? ಗುರುಜನರು ಮತ್ತು ಜಿಜ್ಞಾಸುಗಳ ಮಂಗಳ ಮಿಲನವಾಗುತ್ತದೆ, ಅದು ಶಾರೀರಿಕವಾಗಿದೆ. ಆತ್ಮ ಮತ್ತು ಪರಮಾತ್ಮರ ಮಂಗಳ ಮಿಲನವೆಂದು ಗಾಯನದಲ್ಲೂ ಇದೆ. ಇದು ಎಲ್ಲದಕ್ಕಿಂತ ಶ್ರೇಷ್ಠವಾಗಿದೆ. ಆತ್ಮಗಳು ಪರಮಪಿತ ಪರಮಾತ್ಮನೊಂದಿಗೆ ಮಿಲನ ಮಾಡುತ್ತಾರೆ, ಇದರಲ್ಲಿ ನೀರಿನ ನದಿಯ ಮಾತಿಲ್ಲ. ಇಲ್ಲಿ ನೀವು ಕುಳಿತಿದ್ದೀರಿ, ಇದು ತಮ್ಮೆಲ್ಲರ ಬಹಳ ದೊಡ್ಡದಾದ ಮಂಗಳ ಮಿಲನವಾಗಿದೆ. ಆತ್ಮರೂ ಸಹ ಚೈತನ್ಯವಾಗಿದ್ದಾರೆ. ಇದು ಪರಮಪಿತ ಪರಮಾತ್ಮ ಬಾಡಿಗೆ ತೆಗೆದುಕೊಂಡ ಶರೀರವಾಗಿದೆ ಇದಕ್ಕೆ ಮಂಗಳಮಿಲನ ಎಂದು ಹೇಳಲಾಗುತ್ತದೆ ಕುಂಭಮೇಳವೆಂದು ಹೇಳಲಾಗುತ್ತದೆಯಲ್ಲವೇ? ಕುಂಭವೂ ಸಹ ಸಂಗಮವೆಂದು ಹೇಳಲಾಗುತ್ತದೆ. 3 ನದಿಗಳ ಸಂಗಮದ ಹೆಸರು ಕುಂಭ ಎಂದು ಹೇಳಲಾಗುತ್ತದೆ. ಎಲ್ಲಕ್ಕಿಂತ ದೊಡ್ಡ ಸಂಗಮ ಯಾವುದಾಗಿದೆ? ಸಾಗರ ಮತ್ತು ನದಿಗಳದ್ದಾಗಿದೆ. ಎಲ್ಲದಕ್ಕಿಂತ ದೊಡ್ಡ ನದಿ ಬ್ರಹ್ಮಪುತ್ರ ಆಗಿದೆ, ಅವರಲ್ಲಿ ತಂದೆಯು ಬರುತ್ತಾರೆ ಆದ್ದರಿಂದ ಸಾಗರ ಮತ್ತು ಬ್ರಹ್ಮಪುತ್ರ ನದಿಗಳದ್ದು ಜೊತೆ-ಜೊತೆಯಲ್ಲಿಯೂ ಮೇಳವಾಗುತ್ತದೆ. ಈ ಸಂಗಮಯುಗದಲ್ಲಿ ಕುಂಭಮೇಳವಾಗುತ್ತದೆ. ನೀವೆಲ್ಲರೂ ಜ್ಞಾನಸಾಗರ ತಂದೆಯ ಜೊತೆ ಮಿಲನ ಮಾಡುತ್ತೀರಿ. ಇದಕ್ಕೆ ಈಶ್ವರೀಯ ಕುಂಭಮೇಳ ಎಂದು ಹೇಳಬಹುದಾಗಿದೆ. ಇದು ಆತ್ಮ ಮತ್ತು ಪರಮಾತ್ಮರ ಸಂಗಮವಾಗಿದೆ. ಕುಂಭ ಅಥವಾ ಸಂಗಮ, ಮಾತು ಒಂದೇ ಆಗಿದೆ. ನಾವು ನಮಗಾಗಿ ಸ್ವರ್ಗದ ಸ್ಥಾಪನೆಯನ್ನು ಮಾಡುತ್ತಿದ್ದೇವೆ ಎಂಬುದು ಮಕ್ಕಳು ತಿಳಿದಿದ್ದೀರಿ. ನಾವು ಮನೆಯಲ್ಲಿ ಪವಿತ್ರರಾಗಿರಬೇಕು, ಎಲ್ಲಿ ಪವಿತ್ರತೆ ಇದೆಯೋ ಅದಕ್ಕೆ ಸ್ವರ್ಗವೆಂದು ಕರೆಯಲಾಗುತ್ತದೆ. ಯಾವುದೇ ಅವಗುಣಗಳು ಇರಬಾರದು. ಇದಕ್ಕೂ ಸಹ ಸ್ವರ್ಗವೆಂದು ಕರೆಯಲಾಗುತ್ತದೆ. ಮಕ್ಕಳು ಪವಿತ್ರರಾಗುತ್ತೀರೆಂದರೆ ಪವಿತ್ರತೆಯ ಜೊತೆ ಸುಖ-ಶಾಂತಿ ಇದೆ. ದೇವತೆಗಳ ರೀತಿ ನೀವು ಮಕ್ಕಳ ಸ್ಥಿತಿ ಇರಬೇಕು, ಇದೇ ನಂತರ ನಿಜವಾದ ಸ್ವರ್ಗವಾಗಿಬಿಡುತ್ತದೆ. ಆದ್ದರಿಂದ ಮನೆ-ಮನೆಯನ್ನೂ ಸ್ವರ್ಗವನ್ನಾಗಿ ಮಾಡಿ ಎಂದು ಹೇಳಲಾಗುತ್ತದೆ. ನೀವು ಮಕ್ಕಳು ಮನುಷ್ಯರನ್ನು ಸ್ವರ್ಗದಲ್ಲಿ ಕರೆದುಕೊಂಡು ಹೋಗಲು ಯೋಗ್ಯರನ್ನಾಗಿ ಮಾಡುತ್ತೀರಿ. ನಿಮ್ಮ ಸಲುವಾಗಿಯೇ ಮನೆ-ಮನೆಯನ್ನು ಸ್ವರ್ಗವನ್ನಾಗಿ ಮಾಡಿರಿ ಎಂಬ ಗೀತೆಯಿದೆ. ಸತ್ಯಯುಗದಲ್ಲಿ ಮನೆ-ಮನೆಯಲ್ಲಿಯೂ ಸ್ವರ್ಗವಿತ್ತು ಈಗ ಇಲ್ಲ. ಯಾವ ಮಕ್ಕಳು ತಂದೆಯಿಂದ ಆಸ್ತಿಯನ್ನು ತೆಗೆದುಕೊಳ್ಳುತ್ತಾರೆಯೋ ಅವರಿಗೆ ಮನೆಯಲ್ಲಿಯೇ ಕುಳಿತು ಪತಿತರಿಂದ ಪಾವನರಾಗುವ ಲಕ್ಷ್ಯವನ್ನು ಕೊಡಬೇಕು. ಇದೇ ಅತೀ ದೊಡ್ಡ ತೀರ್ಥ ಸ್ಥಾನವಾಗಿದೆ. ಎಲ್ಲಿ ಶಿವಬಾಬಾ ಸಾಗರ ಇದ್ದಾರೆಯೋ ಅಲ್ಲಿ ನೀವು ಆತ್ಮಗಳು ಅವಶ್ಯವಾಗಿ ಗಂಗೆಯರಿರುತ್ತೀರಿ. ಇದು ಎಲ್ಲದಕ್ಕಿಂತ ದೊಡ್ಡ

ಶ್ರೇಷ್ಠಾತಿಶ್ರೇಷ್ಠ ಮೇಳವಾಗಿದೆ. ಅವೆಲ್ಲವು ಭಕ್ತಿಮಾರ್ಗದ ಮೇಳಗಳಾಗಿವೆ. ಇದು ಜ್ಞಾನಮಾರ್ಗದ ಮೇಳವಾಗಿದೆ. ಭಕ್ತಿಮಾರ್ಗದ ಮೇಳಗಳಂತೂ ಪ್ರತಿಯೊಂದು ಜನ್ಮದಲ್ಲಿ ಆಗುತ್ತಿರುತ್ತದೆ ಆದರೆ ಜ್ಞಾನ ಮಾರ್ಗದ ಮೇಳವು ಕಲ್ಪಕ್ಕೆ ಒಂದೇ ಬಾರಿ ಆಗುತ್ತದೆ. ಇದು ಆತ್ಮಿಕ ಮಿಲನವಾಗಿದೆ. ಪರಮಾತ್ಮನು ಪರಮಧಾಮದಿಂದ ಮಕ್ಕಳೊಂದಿಗೆ ಮಿಲನ ಮಾಡುತ್ತಾರೆ. ಎಲ್ಲದಕ್ಕಿಂತ ಒಳ್ಳೆಯ ಯಾತ್ರೆ ಅಥವಾ ಮೇಳವು ಇದೇ ಆಗಿದೆ. ಈ ಚೈತನ್ಯ ಸಾಗರವಂತೂ ಎಲ್ಲಿ ಬೇಕಾದರೂ ಹೋಗಬಲ್ಲರು ಆದರೆ ಆ ಜಡಸಾಗರವು ಎಲ್ಲಿಯೂ ಹೋಗಲು ಸಾಧ್ಯವಿಲ್ಲ. ಈ ಸಾಗರ ಹೋಗುತ್ತಾರೆ. ತಾವು ನದಿಗಳೂ ಸಹ ನಿಮಂತ್ರಣದ ಮೇರೆಗೆ ಹೋಗುತ್ತೀರಿ. ಜ್ಞಾನಸಾಗರ ತಂದೆಯು ಈ ಬ್ರಹ್ಮಪುತ್ರ ನದಿಯ ಜೊತೆ ಹೋಗುತ್ತಾರೆ. ನೀವು ಭಿನ್ನ-ಭಿನ್ನ ಪ್ರಕಾರದ ನದಿಗಳಾಗಿದ್ದೀರಿ. ಇದರಲ್ಲಿ ಕೆಲವು ಪವಿತ್ರ ನದಿಗಳು, ಇನ್ನೂ ಕೆಲವು ಅಪವಿತ್ರನದಿಗಳು ಆಗಿವೆ. ಕೆಲವೊಮ್ಮೆ ಇಂತಹವರು ಅನೇಕರು ಬರುತ್ತಾರೆ, ಅವರು ಪವಿತ್ರರಾಗಿರುವುದಿಲ್ಲ ಆದರೂ ಸಹ ಬರುತ್ತಾರಲ್ಲವೇ. ಹೊರಗಿನ ಗೃಹಸ್ಥಿಗಳು ಬರುತ್ತಾರೆ ಅವರಿಗೆ ಅನುಮತಿ ಕೊಡಲಾಗುತ್ತದೆ. ಎಲ್ಲರಿಗೂ ಅನುಮತಿ ಕೊಡಬೇಕೆಂದಲ್ಲ. ಯಾರಾದರೂ ಮಿತ್ರ ಸಂಬಂಧಿಗಳು ಬರುತ್ತಾರೆಂದರೆ ಅವರನ್ನು ಮೇಲೆತ್ತಲು ಅನುಮತಿ ಕೊಡಲಾಗುತ್ತದೆ. ಇಲ್ಲವೆಂದರೆ ಇಲ್ಲಿ ನಿಯಮಗಳಂತೂ ಬಹಳ ಇದೆ. ಇಂದ್ರಪ್ರಸ್ಥದಲ್ಲಿ ಯಾವುದೇ ಪತಿತರು ಬರಲು ಸಾಧ್ಯವಿಲ್ಲ. ಯಾವುದೇ ಮಾರ್ಗದರ್ಶಕರು ಪತಿತರನ್ನು ಕರೆದುಕೊಂಡು ಬರುವ ಹಾಗಿಲ್ಲ. ತಂದೆಯು ತಿಳಿಸುತ್ತಾರೆ - ಮಕ್ಕಳೇ ಎಚ್ಚರಿಕೆಯಿಂದಿರಿ ಅವರನ್ನು ಕರೆದುಕೊಂಡು ಬರುತ್ತೀರೆಂದರೆ ಸರ್ಟಿಫಿಕೆಟ್ ನಿಮಗೆ ಸಿಗುತ್ತದೆ. ಯಾರನ್ನು ಜೊತೆ ಕರೆದುಕೊಂಡು ಬರುತ್ತೀರಿ ಅಥವಾ ಕಳುಹಿಸುತ್ತೀರಿ ಅಂದಾಗ ಜವಾಬ್ದಾರಿಯು ನಿಮ್ಮ ಮೇಲೆ ಇರುತ್ತದೆ. ಹಾಗೆಯೇ ನೋಡಿದರೆ ಸೇವಾಕೇಂದ್ರಗಳಲ್ಲಂತೂ ನಿಮಂತ್ರಣ ಕೊಡುತ್ತಾರೆ, ಅನೇಕ ಪತಿತರು ಬರುತ್ತಾರೆ. ಸೇವಾಕೇಂದ್ರಕ್ಕೆ ಯಾರೇ ಬಂದರೆಂದರೆ ಅವರನ್ನು ಪಾವನ ಮಾಡಿರಿ ಆದರೆ ಇಲ್ಲಿ ಸಾಗರ ತಂದೆಯು ಕುಳಿತಿರುವ ಕಾರಣ ಕೆಲವೊಂದು ನಿಯಮಗಳನ್ನು ಇಡಲಾಗಿದೆ. ನಾಡಿ ನೋಡಲಾಗುತ್ತದೆಯಲ್ಲವೇ. ವೈದ್ಯರಂತೂ ಭಿನ್ನ-ಭಿನ್ನ ಪ್ರಕಾರದವರಿರುತ್ತಾರೆ. ಮಮ್ಮಾ-ಬಾಬಾ ಹಾಗೂ ಅನನ್ಯ ಮಕ್ಕಳು ಮಾತನಾಡಿದಾಗ ತಕ್ಷಣ ತಿಳಿದುಬಿಡುತ್ತದೆ ಇವರ ಬುದ್ಧಿಯಲ್ಲಿ ಕುಳಿತುಕೊಳ್ಳುತ್ತದೆ ಅಥವಾ ಇಲ್ಲವೆ ಎಂದು ನೀವು ಇಬ್ಬರು ತಂದೆಯರಿದ್ದಾರೆಂದು ಯಾರಿಗಾದರೂ ತಿಳಿಸಿದರೆ ಅದನ್ನು ಅವರು ತಕ್ಷಣ ಒಪ್ಪುತ್ತಾರೆ. ಹೀಗೆ ತಿಳಿಸಲು ನಿಮಗೆ ಯುಕ್ತಿಗಳನ್ನು ತಿಳಿಸಲಾಗುತ್ತದೆ. ಪರಮಪಿತ ಪರಮಾತ್ಮನನ್ನು ಎಲ್ಲರೂ ನೆನಪು ಮಾಡುತ್ತಾರೆ, ನಾವು ಇಂತಹ ತಂದೆಯ ಮಕ್ಕಳಾಗಿದ್ದೇವೆ ಎಂಬುದನ್ನು ಹೇಳುತ್ತಾರೆ. ಕೇವಲ ಅವರ ಯಥಾರ್ಥ ಪರಿಚಯವನ್ನು ತಿಳಿದುಕೊಂಡಿಲ್ಲ. ಇದಂತೂ ನೀವು ಮಕ್ಕಳಿಗೆ ಗೊತ್ತಿದೆ. ಯಾವ-ಯಾವ ನಾಮ-ರೂಪದಿಂದ ಯಾವ-ಯಾವ ಮನುಷ್ಯರು ಬರುತ್ತಾರೆಯೋ ಅವರು ಅದೇ ನಾಮ-ರೂಪದಿಂದ 5000 ವರ್ಷಗಳ ನಂತರ ಪುನಃ ಅವಶ್ಯವಾಗಿ ಬರಬೇಕು. ಕ್ರೈಸ್ತನ ಯಾವ ಚಿತ್ರವಿದೆ ಅದು ಚಾಚು ತಪ್ಪದೆ ಅದೇ ಸಮಯದಲ್ಲಿ ರಚನೆ ಆಗುತ್ತದೆ, ಅವರ ಬದಲಾಗಿ ಮತ್ತ್ಯಾವುದೇ ಮನುಷ್ಯರ ಚಿತ್ರವು ಅದೇ ಸಮಯದಲ್ಲಿ ಬರಲು ಸಾಧ್ಯವಿಲ್ಲ. ಕೃಷ್ಣನ ಯಾವ ಚಿತ್ರವಿದೆ, ಅದು ಮತ್ತ್ಯಾವುದೇ ಮನುಷ್ಯ ರೂಪದಲ್ಲಿ ಇರಲು ಸಾಧ್ಯವಿಲ್ಲ. ಆತ್ಮವು ಭಿನ್ನ-ಭಿನ್ನ ನಾಮ, ರೂಪ, ದೇಶ, ಕಾಲಗಳಲ್ಲಿ ಈಗ ಪತಿತವಾಗಿಬಿಟ್ಟಿದೆ, ಅದನ್ನು ತಂದೆಯು ಪುನಃ ಪಾವನರನ್ನಾಗಿ ಮಾಡುತ್ತಾರೆ. ಮಕ್ಕಳಿಗೆ ಗೊತ್ತಿದೆ ತಂದೆಯು ಕಲ್ಯಾಣಕಾರಿ ಆಗಿದ್ದಾರೆ, ರಾವಣನು ಅಕಲ್ಯಾಣಕಾರಿ ಆಗಿದ್ದಾನೆ. ಎಲ್ಲರಿಗೂ ಸದ್ಗತಿ ನೀಡುವವರು ತಂದೆ ಆಗಿದ್ದಾರೆ. ಇದರಲ್ಲಿ ಮನುಷ್ಯರಷ್ಟೇ ಅಲ್ಲ ಎಲ್ಲಾ ವಸ್ತುಗಳ ಸದ್ಗತಿ ಆಗಿಬಿಡುತ್ತದೆ. ನರಕದ ವಿನಾಶ, ಸ್ವರ್ಗದ ಸ್ಥಾಪನೆ ಆಗುತ್ತದೆ. ಯಾರು ಕಲ್ಪದ ಹಿಂದೆ ಬಂದಿದ್ದರೋ, ಕೆಲವರು ಪಂಜಾಬಿಗಳು, ಇನ್ನೂ ಕೆಲವರು ಪಾರಸಿಗಳು ಬರುತ್ತಾರಲ್ಲವೇ. ಅವರೆಲ್ಲರಿಗೂ ನಿಮಂತ್ರಣ ಕೊಡಬೇಕು, ತಂದೆಯು ಬಂದಿದ್ದಾರೆಂದು ಡಂಗುರವನ್ನು ಸಾರುವುದರಲ್ಲಿ ಯಾವುದೇ ಅಭ್ಯಂತರವಿಲ್ಲ. ನಿಮ್ಮ ಚಿತ್ರಗಳೂ ಸಹ ಬಹಳ ಚೆನ್ನಾಗಿವೆ. ಈಗ ನೀವು ಮಂದಿರಕ್ಕೆ ಯೋಗ್ಯರಾಗುತ್ತೀರಿ, ಈಗ ಭೂತಗಳನ್ನು ತೆಗೆಯುವುದರಲ್ಲಿ ಬಹಳ ಪರಿಶ್ರಮವಿದೆ. ಲಕ್ಷ್ಮಿ ಅಥವಾ ನಾರಾಯಣನ್ನು ವರಿಸಲು ವಿಕಾರಿ ಅವಗುಣಗಳನ್ನು ತೆಗೆಯುವುದರಲ್ಲಿ ಎಷ್ಟೊಂದು ಪರಿಶ್ರಮವಾಗುತ್ತದೆ. ಕೆಲವರಿಗೆ ಕಾಮದ ಭೂತ, ಕೆಲವರಿಗೆ ಕ್ರೋಧದ ಭೂತ, ಇನ್ನೂ ಕೆಲವರಿಗೆ ಮೋಹದ ಭೂತವು ಪೆಟ್ಟನ್ನು ಕೊಡುತ್ತದೆ. ಒಂದೇಸಲ ಬಿದ್ದು ಹೋಗುತ್ತಾರೆ. ಲೋಭಕ್ಕೆ ವಶರಾಗಿಯೂ ಸಹ ಬೀಳುತ್ತಾರೆ. ಒಳ್ಳೊಳ್ಳೆಯ ಮನೆಯ ಮಕ್ಕಳು ಮಿಠಾಯಿಯನ್ನು ನೋಡಿದರೆ ಬಚ್ಚಿಟ್ಟುಕೊಂಡು ತಿನ್ನುತ್ತಾರೆ. ಈ ಲೋಭವೂ ಸಹ ಅನೇಕರಿಗೆ ನಷ್ಟಗೊಳಿಸಿದೆ. ಲೋಭಕ್ಕೆ ವಶರಾಗಿಯೇ ಕಳ್ಳತನ ಮಾಡುತ್ತಾರೆ. ಮೊದಲು ನೀವು ಭಟ್ಟಿಯಲ್ಲಿ ಇದ್ದಿರಿ, ಈಗಂತೂ ಎಲ್ಲರೂ ತಮ್ಮ-ತಮ್ಮ ಮನೆಯಲ್ಲಿ ಭಟ್ಟಿ ಮಾಡಬೇಕಾಗುತ್ತದೆ. ಆಗಂತೂ ತಂದೆಯು ಒಂದೇ ದೊಡ್ಡ ಭಟ್ಟಿಯನ್ನು ಮಾಡಿಸಿದರು. ಈಗಂತೂ 7 ದಿನಗಳ ಕಾಲ ಭಟ್ಟಿಯಲ್ಲಿ ಇರಬೇಕಾಗುತ್ತದೆ ಎಂದು ತಿಳಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಅನೇಕರಿಗೆ ಭಟ್ಟಿಯಲ್ಲಿ ಕುಳಿತುಕೊಳ್ಳುವುದು ಬಹಳ ಪರಿಶ್ರಮವಾಗುತ್ತದೆ. ಸೇವಾಕೇಂದ್ರಗಳಲ್ಲಿಯೂ ಸಹ ಬರುತ್ತಾರೆಂದರೆ ನೀವು ಜ್ಞಾನದ ಬಣ್ಣವನ್ನು ಹಾಕುತ್ತೀರಿ ಮತ್ತೆ ಮನೆಗೆ ಹೋದಾಗ ಆ ಬಣ್ಣವು ಹಾರಿಹೋಗುತ್ತದೆ. ಸಂಗದೋಷದ ಪ್ರಭಾವ ಬೀರುತ್ತದೆ. ಈಗಂತೂ ಬಹಳ ಪರಿಶ್ರಮ ಪಡಬೇಕು. ನಾವು ಈಶ್ವರೀಯ ಕುಲದಲ್ಲಿ ಕುಳಿತಿದ್ದೇವೆ. ತಾತ, ತಂದೆ ಮತ್ತು ನಾವು ಸಹೋದರ-ಸಹೋದರಿಯರಿದ್ದೇವೆ ಎಂದು ಮಕ್ಕಳಿಗೆ ಗೊತ್ತಿದೆ. ಬ್ರಾಹ್ಮಣ ಕುಲವು ಸರ್ವೋತ್ತಮಕುಲವೆಂದು ಗಾಯನವಿದೆ. ಆ ಬ್ರಾಹ್ಮಣರಿಗೂ ಸಹ ನೀವು ಜ್ಞಾನವನ್ನು ಕೊಡಬಹುದು. ಬ್ರಾಹ್ಮಣರು ಶಿಖೆಗೆ ಸಮಾನರಾಗಿದ್ದಾರೆ. ಈ ಸಂಗಮಯುಗಿ ಬ್ರಾಹ್ಮಣರೇ ನಂತರ ದೇವತೆಗಳಾಗುತ್ತಾರೆ. ಮೊದಲಂತೂ ದೇವತೆಗಳಿಗಿಂತಲೂ ಶ್ರೇಷ್ಠ ಬ್ರಾಹ್ಮಣರಾಗಿದ್ದಾರೆ, ಶಿಖೆಯಂತೂ ಶ್ರೇಷ್ಠವಾಯಿತಲ್ಲವೇ. ನೀವು ಬ್ರಾಹ್ಮಣರು ದೇವತೆಗಳ ಪೂಜೆ ಮಾಡುತ್ತೀರಿ. ತಮ್ಮನ್ನು ಪೂಜಾರಿಗಳೆಂದು, ಅವರನ್ನು ಪೂಜ್ಯರೆಂದು ತಿಳಿಯುತ್ತೀರಿ. ಹೀಗೆ ನೀವು ಆ ಪೂಜಾರಿಗಳು ಬ್ರಾಹ್ಮಣರಿಗೂ ಸಹ ಇದನ್ನು ತಿಳಿಸಬಹುದು. ನೀವಂತೂ ಸತ್ಯ-ಸತ್ಯ ಸಂಗಮಯುಗಿ ಬ್ರಾಹ್ಮಣರಾಗಿದ್ದೀರಿ. ನೀವು ಬ್ರಹ್ಮಾಮುಖವಂಶಾವಳಿ

ಆಗುತ್ತೀರಿ. ನಂತರ ನೀವು ದೇವೀ-ದೇವತೆಗಳಾಗುತ್ತೀರಿ. ಸ್ವರ್ಗದ ದೇವತೆಗಳನ್ನಾಗಿ ಅವಶ್ಯವಾಗಿ ಪರಮಪಿತ ಪರಮಾತ್ಮನೇ ಮಾಡುತ್ತಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಒಳಗಿನ ಅವಗುಣಗಳ ಪರಿಶೀಲನೆ ಮಾಡಿಕೊಂಡು ಅದನ್ನು ತೆಗೆಯಬೇಕಾಗಿದೆ. ಸಂಗದೋಷದಿಂದ ತಮ್ಮ ಸಂಭಾಲನೆ ಮಾಡಿಕೊಳ್ಳಬೇಕಾಗಿದೆ. ದೇವತಾಗುಣಗಳನ್ನು ಧಾರಣೆ ಮಾಡಿ ಸ್ವಯಂನ್ನು ಯೋಗ್ಯರನ್ನಾಗಿ ಮಾಡಿಕೊಳ್ಳಬೇಕಾಗಿದೆ.

2. ಮನೆ-ಮನೆಯನ್ನು ಸ್ವರ್ಗವನ್ನಾಗಿ ಮಾಡುವ ಸೇವೆಯನ್ನು ಮಾಡಬೇಕಾಗಿದೆ. ತಂದೆಯ ನೆನಪಿನಿಂದ ತಮ್ಮಲ್ಲಿರುವ ಭೂತಗಳನ್ನು ಓಡಿಸಬೇಕಾಗಿದೆ. ತಂದೆಯ ಜೊತೆ ಮಿಲನವನ್ನು ಮಾಡುತ್ತಿರಬೇಕಾಗಿದೆ.

ವರದಾನ: ನಿಮ್ಮ ಅನಾದಿ ಸಂಸ್ಕಾರಗಳನ್ನು ಇಮರ್ಜ್ ಮಾಡಿಕೊಂಡು ಸಮಸ್ಯೆಗಳನ್ನು ಪಾರು ಮಾಡುವಂತಹ ಹಾರುವ ಪಕ್ಷಿ ಭವ.

ತಾವೆಲ್ಲರೂ ಅನಾದಿ ರೂಪದಲ್ಲಿ ಹಾರುವವರೇ ಆಗಿರುವಿರಿ, ಆದರೆ ಹೊರೆಯ ಕಾರಣ ಹಾರುವ ಪಕ್ಷಿಯ ಬದಲು ಪಂಜರದ ಪಕ್ಷಿಯಾಗಿರುವಿರಿ. ಈಗ ಪುನಃ ಅನಾದಿ ಸಂಸ್ಕಾರವನ್ನು ಇಮರ್ಜ್ ಮಾಡಿಕೊಳ್ಳಿ ಅರ್ಥಾತ್ ಫರಿಶ್ತಾ ರೂಪದಲ್ಲಿ ಸ್ಥಿತರಾಗಿರಿ, ಇದಕ್ಕೆ ಸಹಜ ಪುರುಷಾರ್ಥಿ ಎಂದು ಹೇಳಲಾಗುವುದು. ಹಾರುವ ಪಕ್ಷಿ ಆದೊಡನೆ ಪರಿಸ್ಥಿತಿಗಳು ಕೆಳಗೆ ಮತ್ತು ತಾವು ಮೇಲೆ ಹೋಗಿ ಬಿಡುವಿರಿ ಇದೇ ಸರ್ವ ಸಮಸ್ಯೆಗಳಿಗೆ ಸಮಾಧಾನವಾಗಿದೆ.

ಸ್ಲೋಗನ್: ಪ್ರತಿ ಹೆಜ್ಜೆಯಲ್ಲಿ ಕಲ್ಯಾಣವಿದೆ ಎಂದು ತಿಳಿದು ಎಲ್ಲಾ ಆತ್ಮಗಳಿಗೆ ಶಾಂತಿಯ ಶಕ್ತಿಯ ದಾನ ಕೊಡುವುದೇ ಸತ್ಯ ಸೇವೆಯಾಗಿದೆ.